# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಸಿಸಿಟೆಕ್/2013-14.

ನಿರ್ದೇಶಕರವರ ಕಛೇರಿ.
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001,
ದಿನಾಂಕ:03-05-2013.

## ಸುತ್ತೋಲೆ

**ವಿಷಯ:**-ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜನಿಯರಿಂಗ್ ಕಾಲೇಜುಗಳಲ್ಲಿ ಸಿಸಿಟೆಕ್ ಉಪಘಟಕಗಳಲ್ಲಿ ಡಿಪ್ಲೋಮಾ ಸಿಇಟಿ ತರಬೇತಿಯನ್ನು ನಡೆಸುವ ಬಗ್ಗೆ.

*ಉಲ್ಲೇಖ:-ಸರ್ಕಾರದ ಆದೇಶ ಸಂಖ್ಯೆ: ಇಡಿ/19/ಟಿಪಿಇ/99, ದಿನಾಂಕ:07-03-2000.*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜನಿಯರಿಂಗ್ ಕಾಲೇಜುಗಳಲ್ಲಿ ಸಿಸಿಟೆಕ್ ಉಪಘಟಕಗಳು ಚಾಲ್ತಿಯಲ್ಲಿರುತ್ತದೆ, ಸದರಿ ಉಪಘಟಕಗಳಲ್ಲಿ ಡಿಪ್ಲೋಮಾ ಸಿಇಟಿ ತರಬೇತಿಯನ್ನು ನಡೆಸಲು ಹಲವಾರು ಸಂಸ್ಥೆಯ ಪ್ರಾಚಾರ್ಯರುಗಳು ಅನುಮತಿಯನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ, ಆದರೆ ಉಲ್ಲೇಖದಲ್ಲಿನ ಸರ್ಕಾರದ ಸಿಸಿಟೆಕ್ ನಿಯಮಾವಳಿಗಳ ಆದೇಶದನ್ವಯ ಬೋಧನಾ ತರಗತಿಗಳನ್ನು(Coaching Classes) ನಡೆಸಲು ಅವಕಾಶವಿರುವುದಿಲ್ಲ ಆದ್ದರಿಂದ ಎಲ್ಲಾ ಸಿಸಿಟೆಕ್ ಉಪಘಟಕಗಳಲ್ಲಿ ಬೋಧನಾ ತರಗತಿಗಳನ್ನು ನಡೆಸಬಾರದೆಂದು ಈ ಮೂಲಕ ಸೂಚಿಸಲಾಗಿದೆ. ಹಾಗೇನಾದರು ಒಂದು ಪಕ್ಷ ತರಗತಿಗಳನ್ನು ನಡೆಸಿದರೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರೇ ಮುಂದಿನ ಆಗು ಹೋಗುಗಳಿಗೆ ನೇರ ಹೊಣೆಗಾರರಾಗಿರುತ್ತಾರೆಂದು ಈ ಮೂಲಕ ಸೂಚಿಸಲಾಗಿದೆ.

8/5/13
ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:

1. ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಸಿಸಿಟೆಕ್ ಉಪಘಟಕಗಳು ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. E-Goverence Cell, 2ನೇ ಮಹಡಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು.
3. ಕಛೇರಿ ಪ್ರತಿ.